<u>ದಿನಾಂಕ : 26.10.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ</u>

<u>ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ.ಎಸ್ ಹೆಚ್ ಎಸ್ ವಕೀಲರಿಂದ :</u>

9. ನಾನು ಐಟಿಐ ಅಂತಿಮ ವರುಷದವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿ:25.12.2016 ರಂದು ಮುತ್ತುರಾಜು ಹಾಗೂ ನಂದೀಶ ಎನ್ನುವವರ ಕೊಲೆಯಾದ ಪ್ರಕರಣದಲ್ಲಿ ನಾನು ಆರೋಪಿ ಎಂದರೆ ಸರಿ. ಸದರಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದ್ದೆ ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ ಎಸ್. ಸಿ. 82/2017 ಎಂದರೆ ನನಗೆ ಪ್ರಕರಣದ ಸಂಖ್ಯೆ ಸರಿಯಾಗಿ ನೆನಪಿಲ್ಲ ಎಂದು ಸಾಕ್ಷಿ ನುಡಿದಿದ್ದಾರೆ. ಸದರಿ ಪ್ರಕರಣದ ಫಿರ್ಯಾದಿ ಈ ಕೇಸಿನ ಮೊದಲನೇ ಆರೋಪಿ ಎಂದರೆ ಸರಿ. ಎಸ್ ಸಿ 82/2017 ರ ಕೆಲವು ಆರೋಪಿಗಳು ಈ ಪ್ರಕರಣದ ಸಾಕ್ಷಿದಾರರು ಎಂದರೆ ನನಗೆ ಗೊತ್ತಿಲ್ಲ. ನನ್ನ ವಿರುದ್ಧ ದಾಖಲಾಗಿರುವ ಕೊಲೆ ಪ್ರಕರಣದಲ್ಲಿ ಈ ಕೇಸಿನ ಕೆಲವು ಆರೋಪಿಗಳು ಸಾಕ್ಷಿದಾರರು ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ.

10. ದಿ: 25.12.2016 ರಂದು ಬೆ.10.00 ಗಂಟೆಗೆ ಬೆಂಗಳೂರಿನಿಂದ ಹೊರಟ ನಾವು ತೊಪ್ಪನಹಳ್ಳಿಯ ತೋಟದ ಮನೆಗೆ ಬಂದಾಗ ಮ.1.00 ಗಂಟೆಯಾಗಿತ್ತು. ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ನಾನು ಮತ್ತು ಫಿರ್ಯಾದಿ ದಿ:25.12.2016 ರಂದು ಬೆ.10.00 ಗಂಟೆಗೆ ಬೆಂಗಳೂರಿನಿಂದ ಹೊರಟ ನಾವು ತೊಪ್ಪನಹಳ್ಳಿಯ ತೋಟದ ಮನೆಗೆ ಬಂದೆವು ಎಂದು ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತೋಟದ ಮನೆಯಲ್ಲಿ ಯಾರೂ ಇರಲಿಲ್ಲವಾದ್ದರಿಂದ ನಮ್ಮ ಚಿಕ್ಕಪ್ಪ ಶಿವರಾಮು ರವರಿಗೆ ಫೋನ್ ಮಾಡಿದಾಗ ಆರೋಪಿಯ ಕಡೆಯವರು ಪುಟ್ಟಲಿಂಗಮ್ಮ ರವರನ್ನು ಕರೆದುಕೊಂಡು ಸುಳ್ಳು ದೂರು ಕೊಡಲು ಮದ್ದೂರು ಪೊಲೀಸ್ ಠಾಣೆಗೆ ಬಂದಿದ್ದಾರೆ ಎಂದು ಹೇಳಿದರು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಫಿರ್ಯಾದಿ ಮದ್ದೂರು ಪೊಲೀಸ್ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಸರಿಯಾಗಿ ನೆನಪಿಲ್ಲ. ಆದರೆ ಮ. 2.00 ರಿಂದ 3.00 ಗಂಟೆ ಸಮಯಕ್ಕೆ ನಾವು ಮದ್ದೂರು ಪೊಲೀಸ್ ಠಾಣೆಗೆ ಹೋಗಿದ್ದ ನೆನಪು.

11. ಸದರಿ ಪೊಲೀಸ್ ಠಾಣೆಯ ಬಳಿ ಆರೋಪಿಗಳು ಇದ್ದರು ಎಂದು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಮಂತ್, ಸ್ವಾಮಿ, ಶಿವರಾಜು, ಯೋಗರಾಜು ಇವರುಗಳು ಮದ್ದೂರಿನಲ್ಲಿ ಕ್ರಿಸ್ ಮಸ್ ಹಬ್ಬದ ಊಟಕ್ಕೆ ಹೋದ ಸ್ನೇಹಿತ ನನ್ನ ಅಣ್ಣ ಯೋಗರಾಜನ ಪರಿಚಿತರಾಗಿದ್ದು, ಅವರ ಹೆಸರು ನನಗೆ ನೆನಪಿಲ್ಲ. ಸದರಿ ಕ್ರಿಸ ಮಸ್ ಹಬ್ಬ ಮಾಡಿದ ಸ್ನೆಹೀತನ ಮನೆಯು ಇದ್ದ ಮದ್ದೂರಿನ ಏರಿಯಾದ ಹೆಸರು ನನಗೆ ನೆನಪಿಲ್ಲ.

12. ಸಂಜೆ 5.15 ರಿಂದ 5.30 ರ ಹೊತ್ತಿಗೆ ಫಿರ್ಯಾದಿ ಹಾಗೂ ಚಾಸಾ-2 ಊರಿನ ಒಳಗೆ ಯಾವ ಕೆಲಸ ಇದೆ ಎಂದು ನಮಗೆ ನಿರ್ದಿಷ್ಟವಾಗಿ ಹೇಳಿರಲಿಲ್ಲ. ಆಗ ನಾನು ಮತ್ತು ಯೋಗರಾಜು ನಡೆದುಕೊಂಡು ನಮ್ಮ ಊರಿನಲ್ಲಿರುವ ಅರಳಿ ಮರದ ಬಳಿಗೆ ಹೋದೆವು ಎಂದು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಆಗ ಆರೋಪಿ-1 ನಮ್ಮನ್ನು ಕುರಿತು ನೀವು ದೂರು ಕೊಟ್ಟು ಏನು ಕಿತ್ತುಕೊಂಡಿರಿ ಎಂದು ಹಾಗೂ ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದ ನಿಖರವಾದ ಸಮಯವನ್ನು ನನಗೆ ಹೇಳಲು ಆಗುವುದಿಲ್ಲ ಆದರೆ ಆಗ ಸಂಜೆಯ ಸಮಯವಾಗಿತ್ತು. ಆಗ ಅರಳಿ ಮರದ ಬಳಿ ತುಂಬಾ ಜನರು ಇದ್ದು ಜೋರಾಗಿ ಮಾತುಕತೆ ಆಗುತ್ತಿದ್ದರಿಂದ ಜೋರಾಗಿ ಶಬ್ದವಾಗುತ್ತಿತ್ತು ಎಂದರೆ ಸಾಕ್ಷಿ ಅಷ್ಟೇನು ಶಬ್ದವಾಗುತ್ತಿರಲಿಲ್ಲ ಆರೋಪಿಗಳು ಮಾತನಾಡುತ್ತಿದ್ದುದು ಕೇಳುತ್ತಿತ್ತು ಎಂದು ನುಡಿದಿದ್ದಾರೆ. ಆ ದಿನ ನಾನು ಹೇಳಿದಂತೆ 1 ನೇ ಆರೋಪಿ ನಮ್ಮನ್ನು ಕುರಿತು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲವಾದರೂ ನಾನು ಆ ಬಗ್ಗೆ ಸುಳ್ಳು ಹೇಲಳುತ್ತಿದರ್ಮ್ದೇನೀ ಎಂದರೆ ಸರಿಯಲ್ಲ.

14. ಆಗ ನನ್ನ ಅಣ್ಣ ಶಿವರಾಜು 1 ನೇ ಆರೋಪಿಯನ್ನು ಏಕೆ ಈ ರೀತಿ ಬೈಯುತ್ತಿದ್ದೀಯಾ ಎಂದು ಕೇಳಿದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ತನ್ನ ಕೈಯಲ್ಲಿ ಹಿಡಿದಿದ್ದ ಮಚ್ಚನ್ನು ನಮ್ಮ ಕಡೆ ತೋರಿಸಿ ನೀನು ನನ್ನ ಸ್ನೇಹಿತ ಎಂದು ಹೇಳುತ್ತಿದ್ದೇನೆ, ಎಲ್ಲರನ್ನೂ ಕರೆದುಕೊಂಡು ಹೋಗು ಇಲ್ಲ ಅಂದರೆ ಎಲ್ಲರನ್ನು ಕತ್ತರಿಸಿ ಹಾಕುತ್ತೇನೆ ಎಂದು ಬೆದರಿಕೆ ಹಾಕಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ. ಆ ದಿನ 1ನೇ ಆರೋಪಿ ಕೈಯಲ್ಲಿ ಯಾವುದೇ ಮಚ್ಚು ಇರಿಲಿಲ್ಲವಾದರೂ ನಾನು ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ಆರೋಪಿ ಮಹೇಂದ್ರ ಏನೋ ಚಿಕ್ಕಹುಡುಗನಾದ ಮುತ್ತುರಾಜುವಿನ ಮೇಲೆ ಗಲಾಟೆಗೆ ಹೋಗಿದ್ದೀರಾ, ದಮ್ಮ ಇದ್ದರೆ ನಮ್ಮ ಮೇಲೆ ತೋರಿಸಿ ಎಂದು ಬೈದನು, ಆಗ ನನ್ನ ಅಣ್ಣ ಯೋಗರಾಜುನು ಮಹೇಂದ್ರನನ್ನು ಕುರಿತು ಮತ್ತುರಾಜುವಿಗೆ ಹೊಡದ ವಿಚಾರವನ್ನು ನೀವು ಏಕೆ ಕೇಳುತ್ತೀರಾ, ಅವರ ಮನೆಯವರು ಇಲ್ಲವಾ ಎಂದು ಕೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಆಗ ಮಹೇಂದ್ರನು ಸದರಿ ಮುತ್ತುರಾಜು ನನ್ನ ಸ್ನೇಹಿತನ ಅಣ್ಣನ ಮಗ, ಅದಕ್ಕೆ ಕೇಳಲು ಬಂದಿದೇವೆ ಎಂದು ಹೇಳಿದನು, ಆಗ ಯೋಗರಾಜು ನೀವು ನಿಮ್ಮ ಸ್ನೇಹಿತನ ಅಣ್ಣನ ಮಗನಿಗೆ ಹೊಡೆದ ಬಗ್ಗೆ ಕೇಳಲು ಬಂದ್ದಿದ್ದೀರಾ ನಾವು ನನ್ನ ಅಣ್ಣನಿಗೆ ಹೊಡೆದ ಬಗ್ಗೆ ಕೇಳಲು ಬರಬಾರದಾ ಎಂದು ಕೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

17. ಆಗ ಫಿರ್ಯಾದಿಯು ಮಹೇಂದ್ರನನ್ನು ಕುರಿತು ಆ ಚಿಕ್ಕ ಹುಡುಗನೇ ನನ್ನ ತಮ್ಮನಿಗೆ ಹೊಡೆದಿದ್ದು, ಅವನ ತಲೆಗೆ ಹೊಲಿಗೆ ಹಾಕಿದ್ದಾರೆ, ಆಗೆಲ್ಲಾ ನೀವು ಎಲ್ಲಿಗೆ ಹೋಗಿದ್ದೀರಿ, ಈಗ ನಮ್ಮ ಮೇಲೆ ಗಲಾಟೆಗೆ ಬಂದಿದ್ದೀರಾ ಎಂದು ಕೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಆರೋಪಿ ಮಹೇಂದ್ರ ಯಾರಿಗೂ ಬೈದಿಲ್ಲ ಎಂದರೆ ಸರಿಯಲ್ಲ.

18. ಫಿರ್ಯಾದಿ ಊರಿನ ಮುಖಂಡರಾದ ಕೆಂಗಲ್ ಗೌಡ ಹಾಗೂ ಮಹೇಂದ್ರ ರವರಿಗೆ ನೀವು ಊರ ಮುಖಂಡರು, 4 ಜನಕ್ಕೆ ಬುದ್ಧಿವಾದ ಹೇಳಬೇಕಾದವರು, ನೀವೇ ಪುಟ್ಟಲಿಂಗಮ್ಮನನ್ನು ಕರೆದುಕೊಂಡು ಹೋಗಿ ಪುಸಲಾಯಿಸಿ ಸುಳ್ಳು ದೂರು ಕೊಡಿಸಿದ್ದಿರಾ, ನೀವೇ ರಾಜಿ ಪಂಚಾಯತಿ ಮಾಡಿಸಬಹುದಿತ್ತು ಅಂತಹದರಲ್ಲಿ ಯಾಕೆ ಈ ರೀತಿ ಮಾಡಿದಿರಿ ಎಂದು ಕೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಆಗ ಆರೋಪಿ ಮಹೇಂದ್ರ ನನಗೆ ಬುದ್ಧಿವಾದ ಹೇಳಲು ಬರುತ್ತೀಯಾ, ಇನ್ನು ಒಂದು ಸಲಿ ಊರ ಒಳಗೆ ನೀನು ಬರಬಾರದು, ಆ ರೀತಿ ಮಾಡಿಬಿಡುತ್ತೇನೆ ಎಂದು ಬೆದರಿಕೆ ಹಾಕಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ಮಹೇಂದ್ರ ಯಾವುದೇ ಬೆದರಿಕೆ ಹಾಕಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ಅದೇ ಸಮಯದಲ್ಲಿ ಆರೋಪಿ ಮಹೇಂದ್ರ ಇವರು ಬಾಯಿ ಮಾತಿಗೆ ಬಗ್ಗುವುದಿಲ್ಲ ಎತ್ತಿಕೊಳ್ಳಿರೋ ದೊಣ್ಣೆಗಳನ್ನು ಎಂದು ಹೇಳಿದಾಗ ಆರೋಪಿ ಮುತ್ತುರಾಜು ಅಲಿಯಾಸ್ ಶೆಡ್ಡು ಓಡಿ ಹೋಗಿ ಅಲ್ಲಿ ನಿಂತಿದ್ದ ಬುಲೇರೋ ವಾಹನದಿಂದ ದೊಣ್ಣೆಗಳನ್ನು ತೆಗೆದುಕೊಂಡು ಬಂದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬುಲೇರೋ ವಾಹನದ ನೊಂದಾವಣಿ ಸಂಖ್ಯೆಯನ್ನು ನಾನು ಹೇಳಲಾರೆ. ಸದರಿ ದೊಣ್ಣೆಗಳು ಗಟ್ಟಿಯಾಗಿದ್ದವು, ಆದರೆ ಯಾವ ಜಾತಿಯ ಮರಕ್ಕೆ ಸೇರಿದ್ದು ಎಂದು ಹೇಳಲಾರೆ. ನಾನು ಹೇಳಿದಂತೆ ಸದರಿ ಬುಲೇರೋ ವಾಹನದಲ್ಲಿ ಯಾವುದೇ ದೊಣ್ಣೆಗಳು ಇರಲಿಲ್ಲ ಹಾಗೂ ಮುತ್ತುರಾಜು ಅಲಿಯಾಸ್ ಶೆಡ್ಡು ಸದರಿ ವಾಹನದಿಂದ ಯಾವುದೇ ದೊಣ್ಣೆಗಳನ್ನು ಹಾಕಿಲ್ಲ ಎಂದರೆ ಸರಿಯಲ್ಲ.

21. ಆಗ ಆರೋಪಿಗಳೆಲ್ಲರೂ ಒಂದೊಂದು ದೊಣ್ಣೆಗಳನ್ನು ತೆಗೆದುಕೊಂಡು ನಮ್ಮ ಕಡೆಗೆ ಬಂದರು ಎಂದು ನಾನು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಚನ್ನೇಗೌಡ ಫಿರ್ಯಾದಿಯ ಕತ್ತಿನ ಪಟ್ಟಿ ಹಿಡಿದುಕೊಂಡು ಸೂಳೆ ಮಗನೇ ನಿಮ್ಮನ್ನು ಸುಮ್ಮನೇ ಬಿಡುತ್ತೀವಾ ಏನೂ ಮಾಡುತ್ತೀವಿ ನೋಡಿ ಎಂದು ಹೇಳುತ್ತಾ ಮಚ್ಚಿನಿಂದ ಫಿರ್ಯಾದಿಯ ತಲೆಗೆ ಹೊಡೆಯಲು ಹೋದನು, ಆಗ ಚಾಸಾ-2 ಫಿರ್ಯಾದಿಯನ್ನು ಹಿಡಿದುಕೊಂಡು ಎಳೆದಿದ್ದರಿಂದ ಆ ಏಟು ಫಿರ್ಯಾದಿಯ ಹಣೆಗೆ ಬಿದ್ದು ರಕ್ತಗಾಯವಾಯಿತು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ಚನ್ನೇಗೌಡನ ಕೈಯಲ್ಲಿ ಯಾವುದೇ ಮಚ್ಚು ಇರಲಿಲ್ಲ ಹಾಗೂ ಆತ ಫಿರ್ಯಾದಿಯ ತಲೆಗೆ ಹೊಡೆಯಲು ಹೋಗಲಿಲ್ಲ ಹಾಗೂ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸಿನ ಫಿರ್ಯಾದಿ ಹಾಗೂ ಎಸ್ ಸಿ 82/17 ರ ಆರೋಪಿಗಳು ಸೇರಿ ಚೆನ್ನೇಗೌಡ ಅಲಿಯಾಸ್ ಹೊನ್ನಯ್ಯನಿಗೆ ಹೊಡೆದಿದ್ದರಿಂದ ಸದರಿ ಚೆನ್ನೇಗೌಡ ಅಲಿಯಾಸ್ ಹೊನ್ನಯ್ಯ ಆಸ್ಪತ್ರೆಯಲ್ಲಿ ಹಲವಾರು ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

22. ಅದೇ ಸಮಯಕ್ಕೆ ಆರೋಪಿ ಮಹೇಂದ್ರ ಚೂರಿ ತೆಗೆದುಕೊಂಡು ಫಿರ್ಯಾದಿಯ ಹೊಟ್ಟೆಗೆ ತಿವಿದನು, ಆದರೆ ಆ ಏನು ಫಿರ್ಯಾದಿಯನ್ನು ಹಿಡಿದುಕೊಂಡಿದ್ದ ಚಾಸಾ-2 ರವರ ಎಡಗೈ ಗೆ ಬಿದ್ದು ರಕ್ತಗಾಯವಾಯಿತು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮಹೇಂದ್ರನ ಕೈಯಲ್ಲಿ ಯಾವುದೇ ಚೂರಿ ಇರಲಿಲ್ಲವಾದರೂ ಸಹ ನಾನು ಆತನ ಮೇಲೆ ಆರೋಪವನ್ನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಆಗ ಆರೋಪಿ ಮಹೇಂದ್ರ ಇವರನ್ನೆಲಾ ಬಿಡುವುದು ಬೇಡೆ ಹೊಡೆದು ಸಾಯಿಸಿಬಿಡೋಣ ಎಂದು ಹೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ಆಗ ಆರೋಪಿ ಮತ್ತುರಾಜು ಅಲಿಯಾಸ್ ಶೆಡ್ಡು ಕಬ್ಬಿಣದ ರಾಡಿನಿಂದ ನನ್ನ ಬೆನ್ನಿನ ಮೇಲೆ ಕುತ್ತಿಗೆ ಹಾಗೂ ಸೊಂಟದ ಬಳಿ ಹೊಡೆದನು, ಅದರಿಂದ ನನಗೆ ತುಂಬಾ ಏಟಾಯಿತು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮುತ್ತುರಾಜು ಅಲಿಯಾಸ್ ಶೆಡ್ಡುವಿನ ಬಳಿ ಯಾವುದೇ ರಾಡು ಇರಲಿಲ್ಲ ಹಾಗೂ ಆತ ರಾಡಿನಿಂದ ನನಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

25. ಮುತ್ತುರಾಜು, ಹೇಮಂತ ರವರಿಗೆ ಆದ ಗಾಯಗಳಿಂದ ಹೆಚ್ಚು ರಕ್ತಸ್ರಾವವಾಗುತ್ತಿತ್ತು. ಅವರುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗೋಣ ಎಂದು ನಾನು ಬೈಕನ್ನು ತೆಗೆದುಕ್ಕೊಳಲು ಹೋದೆ, ಹೇಮಂತನು ಮುತ್ತುರಾಜುವನು ಕರೆದುಕೊಂಡು ನನ್ನ ಬೈಕಿನಲ್ಲಿ ಕೂರಿಸಿಕೊಳ್ಳಲು ಹೊದಾಗ ಆರೋಪಿ ಮುತ್ತುರಾಜು ಅಲಿಯಾಸ್ ಶೆಡ್ಡು ಫಿರ್ಯಾದಿಯ ತಲೆಗೆ ಕಬ್ಬಿಣದ ರಾಡಿನಿಂದ ಹೊಡೆದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

26. ಆಗ ಹೇಮಂತ ಕುಮಾರ ಮುತ್ತುರಾಜು ಅಲಿಯಾಸ್ ಶೆಡ್ಡುವನ್ನು ತಳ್ಳಿ ಫಿರ್ಯಾದಿಯನ್ನು ನಾನು ತೆಗೆದುಕೊಂಡ ಬಂದ ದ್ವಿಚಕ್ರ ವಾಹನದ ಮೇಲೆ ಕೂರಿಸಿಕೊಂಡನು, ನಾನು, ಮುತ್ತುರಾಜು ಹಾಗೂ ಹೇಮಂತ ಬೈಕಿನಲ್ಲಿ ಮದ್ದೂರಿನ ಆಸ್ಪತ್ರೆಗೆ ಹೋಗೋಣ ಎಂದು ಹೊರಟೆವು, ಆಗ ಫಿರ್ಯಾದಿ ಮೊದಲು ನಾವು ಪೊಲೀಸ್ ಠಾಣೆಗೆ ಹೋಗಿ ದೂರು ಕೊಡೋಣ ಹಾಗೂ ನಂತರ ಚಿಕಿತ್ಸೆ ಪಡೆಯೋಣ ಎಂದು ಹೇಳಿದನು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27. ಆ ದಿನ ನಾವು ಮದ್ದೂರಿನ ಪೊಲೀಸ್ ಠಾಣೆಯ ಬಳಿ ಹೋದಾಗ ಸಮಯ ನಿರ್ದಿಷ್ಟವಾಗಿ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಆದರೆ ಸಂಜೆ 7.00 ಗಂಟೆಯ ಆಸುಪಾಸಿನ ಸಮಯ ಇರಬಹುದು.

28. ಆದುದರಿಂದ ನಾವು ಮದ್ದೂರಿನ ಪೊಲೀಸ್ ಠಾಣೆಯ ಬಳಿ ಹೋದಾಗ ಠಾಣೆಯ ಹೊರಗೆ ಇದ್ದ ಒಂದಿಬ್ಬರು ಪೊಲೀಸರು ನಮ್ಮನ್ನು ನೋಡಿ ನೀವು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳಿ ನಾವು ಅಲ್ಲಿಗೆ ಬರುತ್ತೇವೆ ಎಂದು ಹೇಳಿದರು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

29. ಆ ದಿನ ನಾವು ಠಾಣೆಗೆ ಹೋದಾಗ 5-6 ನಿಮಿಷಗಳಲ್ಲಿ ಆಸ್ಪತ್ರೆಗೆ ಹೋದೆವು. ಆದರೆ ನಿಖರವಾದ ಸಮಯವನ್ನು ನನಗೆ ಹೇಳಲು ಆಗುವುದಿಲ್ಲ. ಆ ದಿನ ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ. ಏಕೆಂದರೆ ನನಗೆ ಯಾವುದೇ ರಕ್ತಗಾಯವಾಗಿರಲಿಲ್ಲ.

30. 2015 ರಲ್ಲಿ ಚುನಾವಣೆ ನಡೆದಿದ್ದು, ಅದಕ್ಕೂ ಮೊದಲು ನಮ್ಮ ಕಡೆಯವರಿಗೂ ಒಂದು ಸೀಟು ಕೊಡಿ ಎಂದು ನಮ್ಮ ಅಣ್ಣ ಕೇಳಿದ ದಿನಾಂಕ ನನಗೆ ಗೊತ್ತಿಲ್ಲ ಏಕೆಂದರೆ ಸದರಿ ವಿಚಾರಗಳೆಲ್ಲಾ ನನ್ನ ಅಣಣನಿಗೆ ಗೊತ್ತು. 2015 ರಲ್ಲಿ ಚುನಾವಣೆ ನಡೆದಿದ್ದು, ಅದಕ್ಕೂ ಮೊದಲು ನಮ್ಮ ಕಡೆಯವರಿಗೂ ಒಂದು ಸೀಟು ಕೊಡಿ ಎಂದು ನಮ್ಮ ಅಣ್ಣ ಕೇಳಿದ್ದ ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

31. ಆಗ ಆರೋಪಿಯ ಕಡೆಯವರು ನಿಮಗೆ ಒಂದು ಸೀಟು ಕೊಡಲು ಆಗುವುದಿಲ್ಲ, ನಿಮಗೆ ತಾಕತ್ತು ಇದ್ದರೇ ನೀವೆ ಗೆದ್ದುಕೊಳ್ಳಿ ಎಂದು ಹೇಳಿದ್ದರು ಎಂಬ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಕೆ ಕೊಟ್ಟ ಸಮಯದಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಸಿಐಡಿ ಅಧಿಕಾರಿಗಳ ಮುಂದೆ ಹೇಳಿಲ್ಲವಾದರೂ ಸಹ ಈಗ ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ಈ ಪ್ರಕರಣದ ಮೊದಲನೇ ಆರೋಪಿ ನಮ್ಮ ವಿರುದ್ದ ದೂರು ದಾಖಲು ಮಾಡಿದ್ದರಿಂದ ನಮ್ಮ ಮೇಲಿನ ಆರೋಪದಿಂದ ತಪ್ಪಿಸಿಕೊಳ್ಳಲು ಹಾಗೂ ಈ ಕೇಸಿನ ಆರೋಪಿಗಳು ನಮ್ಮ ವಿರುದ್ಧ

ಸಾಕ್ಷ್ಯ ನುಡಿಯಬಾರದು ಎಂಬ ಕಾರಣಕ್ಕಾಗಿ ಈ ಕೇಸಿನ ಆರೋಪಿಗಳ ವಿರುದ್ದ ನಾನು ಮತ್ತು ನನ್ನ ಅಣ್ಣ ಸೇರಿ ಸುಳ್ಳು ದೂರನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಆರೋಪಿಗಳ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು 5, 7 ರಿಂದ 14 ನೇ ಆರೋಪಿಗಳ ಪರವಾಗಿ ః-</u>

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಂಡಿದ್ದಾರೆ.

<u>ಮರು ವಿಚಾರಣೆ ః ಮಾನ್ಯ ಸರ್ಕಾರಿ ಅಭಿಯೋಜಕರಿಂದ ః</u>

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.